# **37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. **8861/2015**

ಪ್ರಾ.ಸಃ **2** ಚಾ.ಸಃ **2**

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ್ |
| ತಂದೆಯ/ಗಂಡನ ಹೆಸರು | ಮುತ್ತು |
| ವಯಸ್ಸು | 45 ವರ್ಷ |
| ಉದ್ಯೋಗ | ಆಟೋ ಡ್ರೈವರ್ |
| ವಿಳಾಸ | ಜಯನಗರ. ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 30/06/2022 |

ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ

ಸುಮಾರು 5 ವರ್ಷದ ಹಿಂದೆ ಸಂಜೆ 03-04 ಗಂಟೆ ಸಮಯದಲ್ಲಿ ನಾನು ಜಯನಗರ 4 ನೇ ಟಿ ಬ್ಲಾಕ್ ನಲ್ಲಿ ಪೊಲೀಸರು ನನ್ನಿಂದ ಒಂದು ದಾಖಲಗೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಗಲಾಟೆ ವಿಚಾರವಾಗಿ ನಾನು ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಮಾನ್ಯ ಹಿ.ಸ.ಸ.ಅ ರವರಿಂದ

ದಿ. 05/07/2014 ರಂದು ಜಯನಗರ 4 ನೇ ಟಿ ಬ್ಲಾಕ್, 41 ನೇಕ್ರಾಸ್ ನಂ. 7028 ಮನೆಯ ಮುಂಭಾಗ ಬೆಳಗ್ಗೆ 10.30 ರಿಂದ 11.30 ಗಂಟೆಯ ಒಳಗೆ ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು

ಓದಿ ತಿಳಿದುಕೊಂಡು, ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿ. ಸ್ಥಳದಲ್ಲಿ ಪಿರ್ಯಾದುದಾರರು ಗಲಾಟೆ ಕುರಿತು ಪೊಲೀಸರ ಮುಂದೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಘಟನೆ ಬಗ್ಗೆ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ  ಟಿ.ಎಚ್. ಆರೋಪಿ ಪರ ವಕೀಲರಿಂದಃ</u>

ನಾನು ಸುಮಾರು 18 ವರ್ಷಗಳಿಂದ ಆಟೋ ಓಡಿಸುತ್ತಿದ್ದೇನೆ. ನನಗೆ ಚಾಸಾ.1 ರವರ ಪರಿಚಯ ಇಲ್ಲ. ನಾನು ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದ ಸಮಯ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಜಯನಗರ 4 ನೇ ಟಿ ಬ್ಲಾಕ್ ಗೆ ಕರೆದುಕೊಂಡು ಹೋಗಿರುತ್ತಾರೆ. ತಿಲಕ್ ನಗರ ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರ ಜೊತೆ ಮೂರು ಜನರನ್ನು ಕರೆದುಕೊಂಡು ಹೋಗಿರುತ್ತಾರೆ. ನಾನು ಸಾಯಂಕಾಲ 07 ಗಂಟೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳದಲ್ಲಿ ಸುಮಾರು 30-45 ನಿಮಿಷ ಇದ್ದೆ. ಯಾರೂ ಯಾರುಾ ಗಲಾಟೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಗಾಲಟೆಯಾಗಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲವಕಾಶ ಕೇಳಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ   ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ.